**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 910 |
| 2. | ಸದಸ್ಯರ ಹೆಸರು | : | ಶ್ರೀ.ಐವನ್ ಡಿ'ಸೋಜಾ |
| 3. | ಉತ್ತರಿಸಬೇಕಾದ ದಿನಾಂಕ | : | 18.12.2018 |
| 4. | ಉತ್ತರಿಸಬೇಕಾದ ಸಚಿವರು | : | ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ರಾಜ್ಯದಲ್ಲಿ ಎಷ್ಟು ಡೀಮ್ಡ್ ಯುನಿವರ್ಸಿಟಿಗಳು ಕಾರ್ಯನಿರ್ವಹಿಸುತ್ತಿದೆ. ಈ ಕಾಲೇಜುಗಳಲ್ಲಿ ರಾಜ್ಯದ ಎಷ್ಟು ವೈದ್ಯಕೀಯ ವಿದ್ಯಾರ್ಥಿಗ'ಳಿಗೆ ಪ್ರವೇಶ ನೀಡಲಾಗುತ್ತಿದೆ? 2017-18ರಲ್ಲಿ ರಾಜ್ಯದ ಎಷ್ಟು ಡೀಮ್ಡ್ ವಿಶ್ವವಿದ್ಯಾನಿಲಯಗಳಲ್ಲಿ ಮೆಡಿಕಲ್ / ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದ ಕೋಟಾದಲ್ಲಿ ಪ್ರವೇಶ ನೀಡಲಾಗಿದೆ? (ಕಾಲೇಜುವಾರು ವಿವರ ನೀಡುವುದು) | ಕಾಲೇಜುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| (ಆ) | ಡೀಮ್ಡ್ ಯುನಿವರ್ಸಿಟಿ ಮತ್ತು ಅಟೋನಮಸ್ ಕಾಲೇಜುಗಳು ತಮ್ಮ ಇಚ್ಛೆಯಂತೆ ಪರೀಕ್ಷೆಗಳನ್ನು ಮತ್ತು ಕೋರ್ಸುಗಳನ್ನು ನಡೆಸುವುದರಿಂದ ಏಕರೂಪ ಶಿಕ್ಷಣ ಮತ್ತು ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಸರ್ಕಾರ ಗಮನಿಸಿದೆಯೇ? (ವಿವರ ನೀಡುವುದು) | ಡೀಮ್ಡ್ ಯೂನಿವರ್ಸಿಟಿ ಹಾಗೂ ಅಟೋನಮಸ್ ಕಾಲೇಜುಗಳು ಎಂ.ಸಿ.ಐ ನಿಯಮಾವಳಿ ಪ್ರಕಾರ ಏಕರೂಪ ಪಠ್ಯಕ್ರಮಗಳನ್ನು ಹಾಗೂ ಪರೀಕ್ಷಾ ಕ್ರಮಗಳನ್ನು ಅನುಸರಿಸುತ್ತಿವೆ. ಇದರಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. |
| (ಇ) | ವೈದ್ಯಕೀಯ ಕ್ಷೇತ್ರದ ಡೆಂಟಲ್ ಕಾಲೇಜು ಮತ್ತು ಆಯುರ್ವೇದಿಕ್ ಕಾಲೇಜು ವಿದ್ಯಾರ್ಥಿಗಳ ಸಂಖ್ಯೆ ಇಳಿಮುಖವಾಗಲು ಕಾರಣವೇನು? ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು? | ಪ್ರಸಕ್ತ ಸಾಲಿನಿಂದ ಈ ಎರಡು ಕೋರ್ಸ್‌ಗಳಿಗೆ ನೀಟ್ ಪರೀಕ್ಷೆಯಲ್ಲಿ ಅಹರ್ತೆ ಪಡೆದಿರಬೇಕಾಗಿದ್ದು, ನೀಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುತ್ತದೆ.<br>ನೀಟ್‌ನಿಂದ ಅರ್ಹತೆ ಪಡೆದ ವಿದ್ಯಾರ್ಥಿಗಳು ಎಂ.ಬಿ.ಬಿ.ಎಸ್ ಸೀಟಿಗೆ ಮೊದಲ ಆದ್ಯತೆ ನೀಡುತ್ತಾರೆ.<br>ಎಂ.ಬಿ.ಬಿ.ಎಸ್ ಸೀಟು ಸಿಗದ ವಿದ್ಯಾರ್ಥಿಗಳು ಡೆಂಟಲ್ ಮತ್ತು ಆಯುರ್ವೇದಿಕ್ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. |
| (ಈ) | ವೈದ್ಯಕೀಯ ಪದವಿ ಎಂಬಿಬಿಎಸ್ ಸಿಲೆಬಸ್ ಔಟ್‌ಡೇಟೆಡ್ ಆಗಿದ್ದು, ಅದರ ಪರಿಷ್ಕರಣೆ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ? | ಎಂಬಿಬಿಎಸ್ ಕೋರ್ಸಿನ ಪಠ್ಯಕ್ರಮದ ಪರಿಷ್ಕರಣೆ ಕುರಿತು ರಾಷ್ಟ್ರೀಯ ವೈದ್ಯಕೀಯ ಆಯೋಗವು ಕ್ರಮ ಕೈಗೊಳ್ಳಬೇಕಾಗಿರುತ್ತದೆ. |

| | | |
|---|---|---|
| (ಉ) | ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ವ್ಯಾಪಾರ ಕೇಂದ್ರಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? | ಇಲ್ಲ.<br><br>ವೈದ್ಯಕೀಯ / ದಂತ ವೈದ್ಯಕೀಯ ಸೀಟುಗಳ ಹಂಚಿಕೆ ಕುರಿತಂತೆ ಖಾಸಗಿ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕಾಲೇಜುಗಳ ಒಕ್ಕೂಟಗಳೊಂದಿಗೆ ಸರ್ಕಾರವು ಪರಸ್ಪರ ಒಡಂಬಡಿಕೆ (Consensual Agreement) ಮಾಡಿಕೊಳ್ಳುತ್ತಿದೆ. ರಾಜ್ಯದ ಎಲ್ಲಾ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಸೀಟುಗಳಿಗೆ ನೀಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆದ ವಿದ್ಯಾರ್ಥಿಗಳನ್ನು ಮೆರಿಟ್ ಆಧಾರದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸಾಮಾನ್ಯ ಕೌನ್ಸಿಲಿಂಗ್ ಮೂಲಕ ಹಂಚಿಕೆ ಮಾಡಲಾಗುತ್ತಿದೆ. 2ನೇ ಸುತ್ತಿನ ಕೌನ್ಸಿಲಿಂಗ್ & ಮಾಪ್‌ಅಪ್ ರೌಂಡ್‌ನ ನಂತರ ಎಲ್ಲಾ ವಿದ್ಯಾರ್ಥಿಗಳಿಗೆ ಎಲ್ಲಾ ರೀತಿಯ ಸೀಟುಗಳಿಗೂ ಅವಕಾಶ ನೀಡಲಾಗುವುದು. ಉಳಿಕೆಯಾದ ಸೀಟುಗಳನ್ನು 1:10ರ ಅನುಪಾತದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಕೊಂಡಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಸಂಬಂಧಿತ ಶಿಕ್ಷಣ ಸಂಸ್ಥೆಗಳಿಗೆ ಕಳುಹಿಸಿ ಅಂತಹ ಸೀಟುಗಳನ್ನು ಭರ್ತಿಮಾಡಿಕೊಳ್ಳಲು ಅವಕಾಶ ನೀಡಲಾಗುವುದು. |

ಸಂಖ್ಯೆ: ಆಕುಕ 378 ಆರ್‌ಜಿಯು 2018

(ಡಿ.ಕೆ.ಶಿವಕುಮಾರ್)
ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

# ಅನುಬಂಧ

**2017-18**

## Deemed University

| Deemed University | | Intake | Total SQ |
|---|---|---|---|
| 1 | Kasturba Medical College, Manipal. | 250 | 26 |
| 2 | Kasturba Medical College, Mangalore | 250 | 52 |
| 3 | KLE University, Belgaum | 200 | 12 |
| 4 | Nitte University, Mangalore | 150 | 12 |
| 5 | Yenapoya University, Mangalore | 150 | 13 |
| 6 | BLDEA's Medical College, Bijapur | 150 | - |
| 7 | Devaraj Urs Medical College, Kolar | 150 | - |
| 8 | Sri Siddartha Medical College, Tumkur | 130 | - |
| 9 | JSS Medical College, Mysore | 200 | 12 |
| | **TOTAL** | **1630** | **127** |